ಶ್ರೀ ಬಿ. ಕೆ ನಾಗೂರ್.—ಪ್ರಶ್ನೆ (b) ಡಿವುಳು ಮಣ್ಣಿನ ನಿಕ್ಷೇಪಗಳಿಂದ ಕೂಡಿದ ಪ್ರದೇಶಗಳನ್ನು ಗೇಣಿಗೆ ಬಿಡುವುದಕ್ಕಾಗಿ ಸರಕಾರದವರಿಗೆ ಯಾವುವಾದರೂ ಅರ್ಜಿಗಳು ಬಂದಿವೆಯೇ ಎಂಬ ಪ್ರಶ್ನೆಗೆ ಬಂದಿವೆ ಎಂದು ಉತ್ತರ ಇದೆ. ಡಿವುಳು ಅಂದರೆ ಏನು? ನಮ್ಮ ಕಡೆ ಡಿವುಳು ಭೂಮಿ ಎನ್ನುತ್ತಾರೆ ಇವೆರಡೂ ಒಂದೇ ಆಗಿದೆಯೇ ಅಥವಾ ಬೇರೆ ಬೇರೆ ಆಗಿವೆಯೇ ?

ಶ್ರೀ ಕೆ. ಎಫ್. ಪಾಟೀರ್.—ಡಿವುಳು ಮಣ್ಣು ಅಂದರೆ ಸವುಳು ಮಣ್ಣು ಎಂದು ಅರ್ಥ.

ಶ್ರೀ ಬಿ. ಕೆ. ನಾಗೂರ್.—ಎಷ್ಟು ಅರ್ಜಿಗಳು ಬಂದಿವೆ ಆ ಅರ್ಜಿಗಳ ಬಗ್ಗೆ ತನಿಖೆ ನಡೆಸಿ ಎಷ್ಟು ಜನರಿಗೆ ಕೂಟ್ಟಿದ್ದೀರಿ ?

ಶ್ರೀ ಕೆ. ಎಫ್. ಪಾಟೀರ್.—ಅರ್ಜಿಗಳು ಬಂದಿವೆ. ಆದರೆ ತನಿಖೆ ಪೂರ್ತಿ ಮಾಡಿಲ್ಲ. ಇನ್ನೂ ಕೊನೆಯ ನಿರ್ಧಾರ ಮಾಡಿಲ್ಲ.

IMPLEMENTATION OF THE PROTECTED WATER SUPPLY SCHEME TO SIRUGUPPA.

* *Q.*—489. Sri B. E. RAMIAH (Siruguppa).—

Will the Government be pleased to state.—

(*a*) since how long the question of protected Water Supply Scheme to Siruguppa has been pending before the Government ;

(*b*) the cost of the estimate of this Scheme ;

(*c*) why not Government take immediate steps to implement the Scheme in the interest of the public health of Siruguppa ?

A.—Sri B. D. JATTI (Chief Minister) [on behalf of.—Sri T. SUBRAMANYA (Minister for Development and Local Self-Government)].—

(*a*) Since 1953.

(*b*) Rs. 8,80,000.

(*c*) Necessary steps are being taken in this behalf.

ಶ್ರೀ ಎಂ. ಎಂ. ಪಾಟೀರ್.—ಸಿರಗುಪ್ಪಕ್ಕೆ ಕೊಳಾಯಿಗಳ ಮೂಲಕ ನೀರು ಸರಬರಾಯಿ ಮಾಡುವ ಯೋಜನೆಯು ಸರಕಾರದವರಲ್ಲಿ ಎಂಟು ವರ್ಷಗಳ ರಾಗಾಯ್ತು ಇದೆ. ಅದನ್ನು ಕೆಗೆದುಕೊಳ್ಳದೆ ಇರಲ್ಲಕ್ಕೆ ಕಾರಣವೇನು ?

† ಶ್ರೀ ಬಿ. ಡಿ. ಜತ್ತಿ.—ಈ ಯೋಜನೆಗೆ ತಗಲುವ ಖರ್ಚು ಬಹಳ ಇದ್ದುದರಿಂದ ಅದನ್ನು ವಹಿಸಿಕೊಳ್ಳುವುದು. ಪಂಚಾಯಿತಿಯವರಿಗೆ ಸಾಧ್ಯವಾಗಲಕ್ಕಿಲ್ಲ ಎಂಬ ಅನುಮಾನ ಬಂದಿರುವುದರಿಂದ ತಡವಾಗಿದೆ.

ಶ್ರೀ ಎಂ. ಎಂ. ಪಾಟೀರ್.—ಈ ಖರ್ಚನ್ನು ವಹಿಸಿಕೊಳ್ಳುವುದಕ್ಕೆ ಪಂಚಾಯಿತಿಯವರಿಗೆ ಯೋಗ್ಯತೆ ಇದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಆ ರೀತಿ ನಿಮ್ಮ ಅಭಿಪ್ರಾಯವಿದ್ದರೂ ಸಹ ಇಷ್ಟೇ ಎಂದು ನಿಶ್ಚಿತವಾಗಿ ಅಭಿಪ್ರಾಯ ಬರಲಿಲ್ಲ- ಅದಕ್ಕೆ ಕಾರಣವೇನೆಂದರೆ ಈ ಪಂಚಾಯಿತಿಯ ವಾರ್ಷಿಕ ಉತ್ಪನ್ನ 48,918 ರೂಪಾಯಿ ಇದ್ದುದನ್ನು ಮುಂದೆ ಜಾಸ್ತಿ ಮಾಡಿ 1,17,000 ರೂಪಾಯಿ ಮಾಡುತ್ತೇವೆಂದು ತಿಳಿಸಿದ್ದಾರೆ ಅಷ್ಟೇ.

ಶ್ರೀ ಎಂ. ಎಂ. ಪಾಟೀಲ್.—ಈ ತಾಲ್ಲೂಕಿನಲ್ಲಿ ನೀರಾವರಿ ಪ್ರದೇಶವಿರುವುದರಿಂದ ಶೇಕಡ 35 ರಷ್ಟು ಜಾಸ್ತಿ ಕಂದಾಯ ವಸೂಲು ಆಗುತ್ತದೆ ಎಂಬುದು ಗೊತ್ತಿರುವಾಗ ಅಲ್ಲಿಯ ಪರಿಸ್ಥಿತಿ ಉತ್ತಮಗೊಳ್ಳುತ್ತದೆ ಎಂಬುದು ಸರಕಾರದ ಗಮನದಲ್ಲಿದೆಯೇ ?

ಶ್ರೀ ಬಿ. ಡಿ. ಜತ್ತಿ.—ನೀರಾವರಿಯಿಂದ ಆರ್ಥಿಕ ಪರಿಸ್ಥಿತಿ ಉತ್ತಮವಾದರೂ ಕೂಡ, ಹತ್ತು ಲಕ್ಷ ರೂಪಾಯಿಗಳ ಯೋಜನೆಯ maintenance ಮತ್ತು ಸಾಲದ ಹಣದ ಮೇಲೆ interest ಕೊಡುವುದು ಪಂಚಾಯತಿಗೆ ಸಾಧ್ಯವಾಗಲಿಕ್ಕಿಲ್ಲವೆಂದು ಈ ಯೋಜನೆಯನ್ನು ತಡೆ ಹಿಡಿಯಲಾಗಿದೆ. ಕಡಿಮೆ ಖರ್ಚಿನಲ್ಲಿ ಒಂದು ಸ್ಕೀಂ ತಯಾರುಮಾಡಲು ಪರಿಶೀಲನೆ ನಡೆದಿದೆ. ಒಂದು ತಿಂಗಳ ಒಳಗಾಗಿ ಈ ಸ್ಕೀಂ ಬರಬಹುದು.

ಶ್ರೀ ಬಿ. ಕೆ. ನಾಗೂರ್.—ಪಶ್ನೆ (c)ನಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡಲು ಸರಕಾರದವರು ಏಕೆ ತಕ್ಷಣ ಕ್ರಮಗಳನ್ನು ಕೈಕೊಳ್ಳಬಾರದು ಎಂದು ಕೇಳಿದ್ದಕ್ಕೆ ಈ ಸಂಬಂಧದಲ್ಲಿ ನೂಕ್ಷ್ಮ ಕ್ರಮಗಳನ್ನು ಕೈಕೊಳ್ಳಲಾಗಿದೆ ಎಂದು ಉತ್ತರ ಇದೆ. ಹಾಗಾದರೆ ಯಾವ ನೂಕ್ಷ್ಮ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಡಿ. ಜತ್ತಿ.—ಅದಕ್ಕೆ ಉತ್ತರವನ್ನು ಕನ್ನಡದಲ್ಲಯೇ ಈಗ ಹೇಳಿದೆ. ಅದು ಏಕೆ ಗೊತ್ತಾಗಲಿಲ್ಲವೋ ? ಮೊದಲಿಗೆ 1952ರಲ್ಲಿ ಮದ್ರಾಸ್ ಸರಕಾರದ ಆಡಳಿತಯಲ್ಲಿ ಈ ಪ್ರದೇಶ ವಿದ್ದಾಗ್ಲೆ ಪ್ರಾಜೆಕ್ಟ್ ಎಸ್ಟಿಮೇಟು ಮಾಡಿಸಿದ್ದರೂ 10 ಲಕ್ಷ ರೂಪಾಯಿ ಯೋಜನೆ ಭಾರ ವಹಿಸುವುದಕ್ಕೆ ಪಂಚಾಯತಿಗೆ ಶಕ್ತಿ ಇಲ್ಲ ಎಂದು ಕಂಡುಬಂದಿತು. ಎರಡು ಸಾರಿ ಪರಿಶೀಲನೆ ಮಾಡಿದರು. ಏನು ಮಾಡಿದರೂ ಖರ್ಚು 8–9 ಲಕ್ಷಕ್ಕೆ ಕಡಿಮೆಯಾಗುವುದಿಲ್ಲ. ಚಾಕ್ಷೇಷಣೆ ಹೆಚ್ಚು ಮಾಡಿ ಪಂಚಾಯತಿ ಉತ್ಪತ್ತಿ 1,17,000 ಆಗುತ್ತದೆ. ಹಣ ಕೊಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದ್ದಾರೆ. ಇನ್ನೊಂದು ತಿಂಗಳಿನಲ್ಲಿ ಫೈನಲ್ ಪ್ರಾಜೆಕ್ಟ್ ಎಸ್ಟಿಮೇಟ್ ಬರಬಹುದು.

AVAILABILITY OF IRON ORE IN KALENJIMALE HILL, VITTALA FIRKA OF BANTVALA TALUK.

*Q.—529. Sri S. SUBBAYA NAIK (Puttur).—

Will the Government be pleased to state.—

(*a*) whether it is a fact that iron are is available in Kalenjimale Hill, Vittala Firka of Bantvala Taluk ;

(*b*) if so, whether any survey has been undertaken to find out the extent of area in which it is available ?

A.—Sri K. F. PATIL (Minister for Transport, Mining and Food).—

(*a*) Yes.

(*b*) Yes.

Sri K. DOOMAPPA.—What is the percentage of iron in the ore if it has been analysed ?

†Sri K. F. PATIL.—48 to 50% in this area.

Sri GAJANAN PANDIT.—What is the extent of the deposit ?

Sri K. F. PATIL.—It has not been completely investigated. It is only since last month they are at work.